# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ ಮೊಳಕಾಲ್ಮೂರು

ಓಎಸ್. ಸಂಖ್ಯೆ150/2021

ಪಿ.ಡಬ್ಲ್ಯೂ 1

ದಿನಾಂಕ:15.6.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀಸವಾಲು : ಪ್ರತಿವಾದಿ ಪರ ಶ್ರೀ ಜಿ.ಎಂ. ವಕೀಲರಿಂದ

ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಸ್ವಂತ ಊರು ಚೆನ್ನಗಾನಹಳ್ಳಿ, ಅಲ್ಲಿ 45-50 ವರ್ಷದಿಂದ ವಾಸ ಮಾಡುತ್ತಿದ್ದೇನೆ. ನಾನು ಪ್ರತಿವಾದಿಗಳ ಮೇಲೆ ಮನೆ ಜಾಗದ ಸಲುವಾಗಿ ದಾವಾ ಹೂಡಿರುತ್ತೇನೆ. 2 ರಿಂದ 4 ನೇ ಪ್ರತಿವಾದಿಗಳು ನಾನು ಬಂದಾಗಿನಿಂದಲೂ ಚೆನ್ನಗಾನಹಳ್ಳಿಯಲ್ಲಿ ವಾಸವಿರುತ್ತಾರೆ. ನನ್ನ ಮಾವ ಗೊಂಚುಗಾರ ತಿಪ್ಪಯ್ಯ ತಂದೆ ವೀರಭದ್ರಪ್ಪ ನವರಿಗೆ 3 ಜನ ಗಂಡುಮಕ್ಕಳು ಒಬ್ಬರು ಹೆಣ್ಣು ಮಗಳು ಇರುತ್ತಾರೆ. ನನ್ನ ಗಂಡನ ಅಣ್ಣ ಜಿ.ಟಿ. ಬಸ್ಪರೆಡ್ಡಿ ತಂದೆ ಗೊಂಚುಗಾರ ತಿಪ್ಪಯ್ಯ ರವರು ಇವರು ಜಮೀನುದಾರರು ಎಂದರೆ ಸರಿ. ನಮ್ಮ ಒಟ್ಟು ಕುಟುಂಬದ ಸಾಕಾಷ್ಟು ಜಮೀನು ಇರುತ್ತದೆ ಎಂದರೆ ಸರಿ. ನಾವು ಸಹ ಜಮೀನುದಾರರು ಎಂದರೆ ಸರಿ. ನಮ್ಮ ಕುಟುಂಬದಲ್ಲಿ ರಾಜಕೀಯವಾಗಿ ಗ್ರಾಮದಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಆಗಿದ್ದರು ಎಂದರೆ ಸರಿ. ಸಾಕಾಷ್ಟು ಜಮೀನುಗಳು ಇದ್ದರೆ ಸರ್ಕಾರದಿಂದ ಸಾಮಾನ್ಯವಾಗಿ ಯಾವುದೇ ಆಸ್ತಿಗಳನ್ನು ಮಂಜೂರು ಮಾಡುವುದಿಲ್ಲ ಎಂದರೆ ಇರಬಹುದು. ಜಿ.ಟಿ. ಬಸವರೆಡ್ಡಿ ನನ್ನ ಗಂಡನ ಅಣ್ಣ ಸರ್ಕಾರಕ್ಕೆ ಮೋಸ ಮಾಡಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಒಂದು ಹಕ್ಕು ಪತ್ರ ಪಡೆದಿರುತ್ತಾರೆ ಎಂದರೆ ಸರಿಯಲ್ಲ ನಿಪಿ -1 ರಲ್ಲಿ ಖಾತೆ ನಂಬರ್ ಇಲ್ಲ ಎಂದರೆ ಗೊತ್ತಿಲ್ಲ.

ನಾನು ಖಾತೆ ನಂ.141 ಮನೆಯ ಮೇಲೆ ದಾವಾ ಹೂಡಿರುತ್ತೇನೆ. ಜಿ.ಟಿ. ಬಸವರೆಡ್ಡಿ ನನ್ನ ಗಂಡನ ಅಣ್ಣ ದಿನಾಂಕ:3.4.2007 ರಂದು ಮೃತಪಟ್ಟಿರುತ್ತಾರೆ, ಅವರ ಹೆಂಡತಿ ಪಾರ್ವತಮ್ಮ ರವರು ದಿನಾಂಕ:7.10.2016 ರಂದು ಮೃತಪಟ್ಟಿರುತ್ತಾರೆ. ದಾವಾ

ಸ್ವತ್ತಿಗೂ ಮತ್ತು ನಾನು ಹಾಜರುಪಡಿಸಿದ ದಾಖಲಾತಿಗಳು ಒಂದಕ್ಕೊಂದು ಸಂಬಂದವಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಜಿ.ಟಿ. ಬಸಪ್ಪರೆಡ್ಡಿ ನನ್ನ ಗಂಡನ ಅಣ್ಣ ರವರ ಹೆಸರಿಗೆ ಇರುತ್ತದೆ. ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ನನ್ನ ಹೆಸರು ಇಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲದ ಕಾರಣ ನನ್ನ ಹೆಸರಿಗೆ ದಾಖಲಾತಿಗಳನ್ನು ಮಾಡಿಸಿಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾವುಗಳು ದಾವಾ ಸ್ವತ್ತಿನಲ್ಲಿ ಅನುಬೋಗದಲ್ಲಿರುತ್ತೇನೆ ಎಂದು ಕಂದಾಯ ರಸೀದಿಗಳನ್ನು ಹಾಜರುಪಡಿಸಿರುತ್ತೇನೆ. ಬಸಪ್ಪರೆಡ್ಡಿ ರವರಿಂದ ದಾವಾ ಸ್ವತ್ತು ನನಗೆ ಯಾವ ರೀತಿ ಬಂದಿರುತ್ತದೆ ಎಂದು ತೋರಿಸಲು ಕಂದಾಯ ದಾಖಲಾತಿಗಳನ್ನು ಮತ್ತು ಖಾತೆ ಪುಸ್ತಕಗಳನ್ನು ಹಾಜರುಪಡಿಸುತ್ತೇನೆ.

ನಾವು ರೆಡ್ಡಿ ಜನಾಂಗಕ್ಕೆ ಸೇರಿದವರು. 2 ರಿಂದ 4 ನೇ ಪ್ರತಿವಾದಿಗಳು ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವರು. ನನ್ನ ಮತ್ತು ಪ್ರತಿವಾದಿಗಳ ಕುಟುಂಬಕ್ಕೂ ಯಾವುದೇ ಸಂಬಂದವಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಯ ಹೆಂಡತಿ ದುರ್ಗಮ್ಮನ ಹೆಸರಿಗೆ ಖಾತೆ ನಂಬರ್ 281 ರಲ್ಲಿ ಪೂರ್ವ-ಪಶ್ಚಿಮ 30 ಅಡಿ, ಉತ್ತರ-ದಕ್ಷಿಣ 40 ಅಡಿ ಆಸ್ತಿಯನ್ನು ಪಂಚಾಯಿತಿಯಿಂದ ಅನುಬೋಗದ ಪ್ರಕಾರ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. 4 ನೇ ಪ್ರತಿವಾದಿ ದುರ್ಗಮ್ಮ ಗಂಡ ಹನುಮಂತಪ್ಪ ನ ಹೆಸರಿಗೆ ಖಾತೆ ನಂಬರ್ 284 ರಲ್ಲಿ ಪೂರ್ವ -ಪಶ್ಚಿಮ 30 ಅಡಿ, ಉತ್ತರ-ದಕ್ಷಿಣ 40 ಅಡಿ ಆಸ್ತಿಯನ್ನು ಪಂಚಾಯಿತಿಯಿಂದ ಅನುಬೋಗದ ಪ್ರಕಾರ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿಗೂ ಮತ್ತು ಖಾತೆ ನಂ. 281 ಮತ್ತು 284 ಕ್ಕೂ ಸಂಬಂದವಿಲ್ಲ ಎಂದರೆ ಗೊತ್ತಿಲ್ಲ. ನನಗೂ ಮತ್ತು ಪ್ರತಿವಾದಿಗಳ ಆಸ್ತಿಗೂ ಯಾವುದೇ ಸಂಬಂದವಿಲ್ಲದ್ದರೂ ಸಹ ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವಾ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಖಾತೆ ನಂ.281 ಮತ್ತು 281, ದಾವಾ ಆಸ್ತಿಯಲ್ಲಿ ನಾನು ಅನುಬೋಗದಲ್ಲಿರುತ್ತೇನೆ ಎಂದು ದಾಖಲಾತಿಗಳನ್ನು

ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಬಸಪ್ಪರೆಡ್ಡಿ ಯವರ ವಾರಸುದಾರರು ಎಂದು ತೋರಿಸಲು ನಾನು ಕಂದಾಯ ದಾಖಲಾತಿಗಳನ್ನು ಹಾಜರುಪಡಿಸಿರುವ ಬಗ್ಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತಿನ ಅನುಬೋಗದಲ್ಲಿ ಇಲ್ಲದ ಕಾರಣ, ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಆಸ್ತಿಗಳ ಬಗ್ಗೆ ಅಷ್ಟಾಗಿ ಗೊತ್ತಿರುವುದಿಲ್ಲ, ನಮಗೆ ಹಕ್ಕು ಪತ್ರ ಸಿಕ್ಕ ಕಾರಣ ಗೊತ್ತಾಗಿರುತ್ತದೆ ಎಂದು ನುಡಿದಿರುತ್ತಾರೆ ನಮ್ಮದಲ್ಲದ ಆಸ್ತಿಯನ್ನು ಕಬಳಿಸಿಕೊಳ್ಳಲು ಸುಳ್ಳು ದಾವಾವನ್ನು ಹೂಡಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಗಂಡನ ಅಣ್ಣನ ಆಸ್ತಿಯಾದ ಕಾರಣ ನಾನು ದಾವಾ ಹೂಡಿರುತ್ತೇನೆ ಎಂದು ನುಡಿದಿರುತ್ತಾರೆ. ನಿಪಿ-4 ಮತ್ತು 5 ರಲ್ಲಿ ಕಾಣಿಸುವಂತೆ ರಸ್ತೆಯ ಪಕ್ಕದಲ್ಲಿ ನಿಂತು ಪೋಟೊ ತೆಗೆಸಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಕಳ್ಳೆಯ ಪಕ್ಕ ಗೇಟ್ ಬಳಿ ನಿಂತು ಪೋಟೋ ತೆಗೆಸಿರುತ್ತೇನೆ. ದಾವಾ ಆಸ್ತಿಯು ನನ್ನದಾಗಿದ್ದರೆ ನಾನು ಗೇಟ್ ಒಳಗಡೆ ಹೋಗಿ ಪೋಟೋ ತೆಗೆಸುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಮಗನಾದ ಸುದರ್ಶನರೆಡ್ಡಿರವರ ಮಾತು ಕೇಳಿ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವಾವನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಅಳತೆ ಮಾಡಲು ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಮೊಳಕಾಲ್ಮೂರು